ನಾನ್ ಎಸ್.ಸಿ.ಎಸ್ ಅಧಿಕಾರಿಗಳನ್ನು ಐ.ಎ.ಎಸ್.ಗೆ ಆಯ್ಕೆ ಕುರಿತು

1728 - ಶ್ರೀ ಕುಂಬೈ ಸುಂದರರಾವ್ (ಸುರತ್ಕಲ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿನ ನಾನ್ ಎಸ್‌ಸಿಎಸ್ ಅಧಿಕಾರಿಗಳನ್ನು ಐಎಎಸ್‌ಗೆ ಆಯ್ಕೆಗಾಗಿ ಶಿಫಾರಸ್ಸು ಮಾಡುವಾಗ ಸರ್ಕಾರದವರು ಅನುಸರಿಸುವ ನೀತಿ ನಿಯಮಗಳು ಯಾವುವು? ಎಷ್ಟು ಅಧಿಕಾರಿಗಳಿಗೆ ಸರ್ಕಾರವು ಈ ಬಗ್ಗೆ ಶಿಫಾರಸ್ಸು ಮಾಡಿದೆ?*

ಆ) *ಹೀಗೆ ಸರ್ಕಾರದವರು ಶಿಫಾರಸ್ಸು ಮಾಡಿದ್ದನ್ನು ಸಿಎಟಿಯವರು ರದ್ದು ಪಡಿಸಿದ ಪ್ರಕರಣಗಳೆಷ್ಟು? ಅಂಥ ಪ್ರಕರಣಗಳಲ್ಲಿ ರಾಜ್ಯ ಸರ್ಕಾರವು ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ ಪ್ರಕರಣಗಳು ಇವೆಯೆ? (ವಿವರಗಳನ್ನು ನೀಡುವುದು)*

ಇ) *ನಾನ್ ಎಸ್‌ಸಿಎಸ್ ವರ್ಗದ ಅಧಿಕಾರಿಗಳಾಗಿದ್ದಾಗ ಅವ್ಯವಹಾರ ಪ್ರಕರಣಗಳಲ್ಲಿ ಭಾಗಿಯಾಗಿದ್ದು ಆ ಕುರಿತು ಕಾನೂನಿನ ಕ್ರಮವನ್ನು ಎದುರಿಸುತ್ತಿರುವವರಿಗೆ ಐಎಎಸ್ ಆಯ್ಕೆಗೆ ಶಿಫಾರಸ್ಸು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:ಬಂದಿದ್ದಲ್ಲಿ ಆಪಾದಿತ ಅಧಿಕಾರಿಗಳನ್ನು ಐಎಎಸ್‌ಗೆ ಬಡ್ತಿ ನೀಡಲು ಶಿಫಾರಸ್ಸು ಮಾಡುವುದು ನೀತಿ ನಿಯಮಗಳಿಗೆ ಅನುಗುಣವಾಗಿರುತ್ತದೆಯೇ?*

ಶ್ರೀ ಜೆ.ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) :

ಅ) ನಾನ್ ಎಸ್‌ಸಿಎಸ್ ಅಧಿಕಾರಿಗಳನ್ನು ಐಎಎಸ್‌ಗೆ ಆಯ್ಕೆಗಾಗಿ ಶಿಫಾರಸ್ಸು ಮಾಡುವಾಗ ಐಎಎಸ್ (ಆಯ್ಕೆಮೂಲಕ ನೇಮಕಾತಿ) ನಿಯಮಗಳು 1956ರಲ್ಲಿರುವ ನಿಯಮಗಳನ್ನು ಅನುಸರಿಸಲಾಗುತ್ತದೆ.1996 ರಲ್ಲಿ ಉದ್ಭವಿಸಿದ ಒಂದು ಹುದ್ದೆಯನ್ನು ಭರ್ತಿಮಾಡುವ ಸಂಬಂಧದಲ್ಲಿ ರಾಜ್ಯ ಸರ್ಕಾರವು ನಿಯಮಗಳ ಮೇರೆಗೆ ಒಟ್ಟು 5 ನಾನ್ ಎಸ್‌ಸಿಎಸ್ ಅಧಿಕಾರಿಗಳನ್ನು ಶಿಫಾರಸ್ಸು ಮಾಡಿದೆ.

ಆ) ಒಂದು. 1996ರ ಪ್ರಕರಣದಲ್ಲಿ ಸರ್ಕಾರವು ಶಿಫಾರಸ್ಸು ಮಾಡಿದ್ದನ್ನು ಬೆಂಗಳೂರಿನ ಸಿಎಟಿಯು ರದ್ದುಪಡಿಸಿದೆ. ಸಿಎಟಿ ಆದೇಶದ ವಿರುದ್ಧ ರಾಜ್ಯ ಸರ್ಕಾರವು ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದೆ. (ಸಿವಿಲ್ ಮೇಲ್ಮನವಿ ಸಂಖ್ಯೆ 23173 : 96).

ಇ) ಐಎಎಸ್ ಆಯ್ಕೆಗೆ ರಾಜ್ಯ ಸರ್ಕಾರದಿಂದ ಶಿಫಾರಸ್ಸು ಗೊಂಡ 5 ಅಧಿಕಾರಿಗಳ ಪೈಕಿ ಕೃಷಿ ಇಲಾಖೆಯ ಓರ್ವ ಅಧಿಕಾರಿಯವರು ಕರ್ನಾಟಕ ಸಹಕಾರ ಎಣ್ಣೆ ಬೀಜಗಳ ಉತ್ಪಾದಕರ ಮಹಾಮಂಡಳಿಯಲ್ಲಿ ಜನರಲ್ ಮ್ಯಾನೇಜರ್‌ಆಗಿ ಕೆಲಸಮಾಡುತ್ತಿದ್ದ ಅವಧಿಯಲ್ಲಿ, ಗೋಣಿಚೀಲ ಮತ್ತು ತಾಡಪತ್ರೆ ಖರೀದಿ ವ್ಯವಹಾರದಲ್ಲಿ ಪ್ರಾದೇಶಿಕ ಎಣ್ಣೆಬೀಜ ಬೆಳೆಗಾರರ ಸಹಕಾರ ಸಂಘಗಳ ಒಕ್ಕೂಟ, ಹೊಸಪೇಟೆ ಇವರಿಗೆ ಒಟ್ಟು ರೂ 36,40,952-00 ಮೊತ್ತದಷ್ಟು ನಷ್ಟವನ್ನು ಉಂಟುಮಾಡಿದ್ದಾರೆಂಬ ಆರೋಪದ ಮೇಲೆ, ಉಂಟಾಗಿರುವ ನಷ್ಟವನ್ನು ಬಡ್ಡಿಯೊಂದಿಗೆ ಅವರಿಂದ

ವಸೂಲು ಮಾಡಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಅನ್ವಯ ಏಕೆ ಆದೇಶ ಹೊರಡಿಸಬಾರದು ಎಂಬುದಕ್ಕೆ ವಿವರಣೆ ನೀಡುವಂತೆ ಸಹಕಾರ ಸಂಘಗಳ ಅಪರ ನಿಬಂಧಕರು ಸದರಿ ಅಧಿಕಾರಿಗೆ ದಿನಾಂಕ : 30-5-94 ರಂದು ನೋಟೀಸ್ ಅನ್ನು ಜಾರಿ ಮಾಡಿರುವ ಸಂಗತಿ ಮತ್ತು ಸದರಿ ಅಧಿಕಾರಿಯವರು ನೋಟೀಸಿನ ವಿರುದ್ಧ ಕರ್ನಾಟಕ ಉಚ್ಚನ್ಯಾಯಾಲಯದಿಂದ ತಡೆಯಜ್ಞೆಯನ್ನು ಪಡೆದಿರುವ ಸಂಗತಿ, ಆಯ್ಕೆ ಸಮಿತಿಯ ಸಭೆ ಮುಗಿದ ನಂತರ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಗಮನಕ್ಕೆ ಬಂದಿದೆ. ಕೃಷಿ ಇಲಾಖೆಯ ಆಪಾದಿತ ಅಧಿಕಾರಿಯ ವಿರುದ್ಧ ಮಾಡಲಾದ ಆರೋಪಗಳು ಇನ್ನೂ ಪ್ರಾರಂಭಿಕ ಹಂತದಲ್ಲಿದ್ದು, ಅವರ ಮೇಲೆ ಇಲಾಖಾ ಶಿಸ್ತು ಪ್ರಕರಣ ಅಥವಾ ನ್ಯಾಯಾಲಯ ಮೊಕದ್ದಮೆಗಳನ್ನು ಇನ್ನೂ ಹೂಡಿಲ್ಲವಾದ್ದರಿಂದ, ಅವರ ಹೆಸರನ್ನು ಐಎಎಸ್‌ಗೆ ಆಯ್ಕೆಗೆ ಶಿಫಾರಸ್ಸು ಮಾಡಿರುವುದು ನಿಯಮಗಳಿಗೆ ಅನುಗುಣವಾಗಿಯೇ ಇದೆ.

ನೀರಾವರಿ ಯೋಜನೆಯಲ್ಲಿ ಇ.ಸಿ.ಎಲ್.ಬಿ. ಉಪಕರಣಗಳ ಅಳವಡಿಕೆ

1729 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೀರಾವರಿ ಯೋಜನೆಯಲ್ಲಿ ಪಂಪು ಸೆಟ್ಟುಗಳನ್ನು ಅಳವಡಿಸುವಾಗ ಇ.ಎಲ್.ಸಿ.ಬಿ. ಉಪಕರಣಗಳನ್ನು ಅಳವಡಿಸಬೇಕೆಂಬ ಸರ್ಕಾರಿ ಆದೇಶ ಇದೆಯೇ?

ಆ) ಇದ್ದರೆ ಎಷ್ಟು ಕಡೆ ಅಳವಡಿಸಲಾಗಿದೆ?

ಈ) ಅಳವಡಿಸದೆ ಇದ್ದರೆ ಏನು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಶರಣಪ್ಪ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ನೀರಾವರಿ ಯೋಜನೆಯಲ್ಲಿ ಪಂಪು ಸೆಟ್ಟುಗಳನ್ನು ಅಳವಡಿಸುವಾಗ ಇ.ಎಲ್.ಸಿ.ಬಿ. ಉಪಕರಣಗಳನ್ನು ಅಳವಡಿಸುವುದನ್ನು ಕಡ್ಡಾಯ ಗೊಳಿಸಿರುವುದಿಲ್ಲ.

ಆ) ಪ್ರಶ್ನೆ 'ಅ' ಭಾಗಕ್ಕೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ತುಮಕೂರು ಜಿಲ್ಲೆಯಲ್ಲಿ ಆರ್.ಇ.ಪಿ. ಯೋಜನೆಯಡಿ ಸೇರಿಸಲಾದ ಹಳ್ಳಿಗಳು.

1731 - ಶ್ರೀ ಹೆಚ್.ಬಿ. ನಂಜೇಗೌಡ (ತುರುವೇಕೆರೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರ್.ಇ.ಪಿ. ಸ್ಕೀಮ್‌ನಲ್ಲಿ ತುಮಕೂರು ಜಿಲ್ಲೆಗೆ ಎಷ್ಟು ಹಳ್ಳಿಗಳನ್ನು ಸೇರಿಸಲಾಗಿದೆ?

ಆ) ತುರುವೇಕೆರೆ ತಾಲ್ಲೂಕಿಗೆ ಮಂಜೂರಾಗಿರುವ ಆರ್.ಇ.ಪಿ. ಸ್ಕೀಂನಲ್ಲಿರುವ ಹಳ್ಳಿಗಳು ಎಷ್ಟು?